(ಡಾ॥ ಆರ್. ನಾಗನಗೌಡ.)

ನಿಗೂ ಒಂದು ವ್ಯತ್ಯಾನವಿದೆ. ಚಿಕ್ಕ ಚಿಕ್ಕ ಹ್ಯಾಮ್ಲೆಟ್‌ಗಳು, ಹಳ್ಳಿಗಳು ಇವುಗಳನ್ನು ಎಣಿಕೆ ಮಾಡಿರುವುದರಿಂದ ಇಲ್ಲ number of villages ಜಾಸ್ತಿಯಾಗಿ ಕಾಣುತ್ತದೆ. ಅಲ್ಲಿ ಗಾ.ಮಕ್ಕೆ ಸೇರಿದ ಹ್ಯಾಮ್‌ಲೆಟ್‌ಗಳನ್ನು separate villageಗಳನ್ನಾಗಿ ಪರಿಗಣಿಸುವುದಿಲ್ಲ. ಆದುದರಿಂದ ಅಲ್ಲಿ villages ಕಡಮೆ ಕಾಣುತ್ತದೆ ಮತ್ತು percentage ಜಾಸ್ತಿ ಕಾಣುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಮುದ್ರಾಸಿದಲ್ಲಿ 2,000 ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸಿರುವುದು ನಿಜವೇ?

Dr. R. NAGAN GOWDA.—Notice.

Mr. SPEAKER.—That is not an information which our Government can furnish.

ಶ್ರೀ ಬಿ. ಹುಚ್ಚೇಗೌಡ.—ನಮ್ಮ ನೆರೆಹೊರೆಯವರು ಯಾವರೀತಿ advance ಆಗುತ್ತಾ ಇದ್ದಾರೆಂಬುದನ್ನು ನೋಡಿಕೊಂಡು ನಡೆದುಕೊಳ್ಳುವುದು ನಮ್ಮ ಕರ್ತವ್ಯವಲ್ಲವೇ?

Sri K. HANUMANTHAIYA.—That is not an information.

ಶ್ರೀ ಬಿ. ಹುಚ್ಚೇಗೌಡ.—ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿ ಒದಗಿಸುವುದರಲ್ಲಿ ಮೈಸೂರು ಕೂಡ ಮದ್ರಾಸ್ ಮತ್ತು ಆಂಧ್ರದ ಮಟ್ಟಕ್ಕೆ ಯಾವಾಗ ಬರುತ್ತದೆಯೆಂದು ಹೇಳುವುದಕ್ಕಾಗುತ್ತದೆಯೇ?

ಡಾ॥ ಆರ್. ನಾಗನಗೌಡ.—ಅವರಿಗಿಂತಲೂ ಮುಂದೆ ಇದ್ದೇವೆ. ಅವರ ಜೊತೆಗೆ ಬರುವ ಪ್ರಶ್ನೆ ಏಳುವುದಿಲ್ಲ. ಅವರನ್ನು ಹಿಂದೆಬಿಟ್ಟಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಈಗ 55-56ರಲ್ಲಿ ಎಷ್ಟು ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ?

ಡಾ॥ ಆರ್. ನಾಗನಗೌಡ.—ಈಗ ನದ್ಧಕ್ಕೆ 168 ಎಂದು ಅಂದುಕೊಂಡಿದ್ದೇವೆ. ಮುಂದಿನ ವರ್ಷಕ್ಕೆ ಎಷ್ಟು ಸಾಧ್ಯವೋ ಅಷ್ಟನ್ನು ಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ಎರಡು ವರ್ಷಗಳಲ್ಲ sanction ಆಗಿರುವುದನ್ನು ಕೂಡ ಇನ್ನೂ ತೆಗೆದು ಕೊಳ್ಳದೇ ಇರುವುದಕ್ಕೆ ಕಾರಣವೇನು? ತುರವೇಕೆರೆ ಮತ್ತು ಬಾಣಸಂದ್ರ ಇವುಗಳಿಗೆ sanction ಆಗಿ ಎರಡು ವರ್ಷಗಳಾದವು, ಇನ್ನೂ ಆ ಕೆಲಸಗಳನ್ನು ತೆಗೆದು ಕೊಳ್ಳದೇ ಇರುವುದಕ್ಕೆ ಕಾರಣವೇನು?

Dr. R. NAGAN GOWDA.—Notice. There may be some other reason. I am unable to say that now.

Sri Mulka GOVINDA REDDY.—Are the Government aware that the Planning Commission has issued a directive to the State asking them to prepare a survey about the electricity requirements of the State?

Dr. R. NAGAN GOWDA.—We have a scheme for supplying electricity for electrification of villages. We have already got a scheme.

Sri Mulka GOVINDA REDDY.—I am asking about the entire electricity requirements of the State.

Dr. R. NAGAN GOWDA.—I do not know which one you are referring to.

Sri Mulka GOVINDA REDDY.—Did the Planning Commission issue a directive to the State Government to survey the electricity requirements of the State?

Dr. R. NAGAN GOWDA.—Notice.

ಶ್ರೀ ಎಲ್. ಸಿದ್ದಪ್ಪ.—Rural electrificationಗೋಸ್ಕರ ಮೊದಲನೆಯ ಪಾಂಚವಾರ್ಷಿಕ ಯೋಜನೆಯಲ್ಲಿ 202 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ. ಆದರೆ ಇದುವರೆಗೆ ಖರ್ಚು ಮಾಡಿದ ಮೊಬಲಗು ಎಷ್ಟು?

ಡಾ॥ ಆರ್. ನಾಗನಗೌಡ.—ಈಗ ನಾವು 90 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಖರ್ಚು ಮಾಡಿದ್ದೇವೆ.

ಶ್ರೀ ಎಲ್. ಸಿದ್ದಪ್ಪ.—ನಾಲ್ಕು ವರ್ಷಗಳಿಗೆ 90 ಲಕ್ಷ ರೂಪಾಯಿ ಮಾತ್ರ ಖರ್ಚುಮಾಡಿರುವುದು ಬಹಳ ಕಡಮೆ ಅಲ್ಲವೇ?

ಡಾ॥ ಆರ್. ನಾಗನಗೌಡ.—ಈಗ ಉಳಿದುದನ್ನೆಲ್ಲಾ 55-56ನೇ ಇಸವಿಗೆ ತೆಗೆದುಕೊಳ್ಳುತ್ತೇವೆ.

ಶ್ರೀ ಎಲ್. ಸಿದ್ದಪ್ಪ.—ಅದನ್ನೆಲ್ಲಾ ಖರ್ಚು ಮಾಡುವುದಕ್ಕೆ material ಮತ್ತು ಸಿಬ್ಬಂದಿ ಸಾಕಾಗುತ್ತದೆಯೇ?

ಡಾ॥ ಆರ್ ನಾಗನಗೌಡ.—ಅದಕ್ಕೆ ನಾವು ಏರ್ಪಾಡು ಮಾಡುತ್ತಿದ್ದೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ವಿದ್ಯುಚ್ಛಕ್ತಿ ನರಬರಾಯ ಮಾಡುವುದಕ್ಕೆ percentage of revenue ಇಷ್ಟು ಎಂದು ನಿಗದಿ ಮಾಡಿದ್ದೀರಾ?

ಡಾ॥ ಆರ್. ನಾಗನಗೌಡ.—ಮಲೆನಾಡಿನಲ್ಲಿ ಶೇಕಡ 5, ಮೈದಾನದಲ್ಲಿ ಶೇಕಡ 7½ ಎಂದು ನಿಗದಿಮಾಡಿದ್ದೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—7½% ಜಾಸ್ತಿಯೆಂದು ಅನೇಕ ಗ್ರಾಮಗಳಿಗೆ electricity sanction ಮಾಡುವುದಕ್ಕೆ ನಿಧಾನವಾಗುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಹನುಮಂತಯ್ಯ.—ಆ ರೇಟ್ ಕಮ್ಮಿ. ಇನ್ನೂ ಸ್ವಲ್ಪ ಹೆಚ್ಚು ಮಾಡಬೇಕೆಂದು ಪರ್ಯಾಲೋಚನೆಯಲ್ಲಿದೆ.

Electricity (supply to certain villages of Gubbi Taluk).

Q.—466. Sri B. C. NANJUNDAIYA (Kora).—

Will the Government be pleased to state:—

(*a*) the number of applications received asking for the supply of electric power for agricultural purposes from the people of Irkasandra, Bidare, Kodiyala, Chelur, Hosakere, Alalgatta and Muganayakanakote villages of Gubbi Taluk *via* Bellavi of Tumkur Taluk:

(*b*) the amount of the estimate worked out for the supply of electric power to these villages:

(*c*) as per this estimate, in respect of how many H.P.'s power deposit amount is expected ;

(*d*) whether the deposit amount expected in respect of this is not realised already ;

(*e*) the number of raiyats that have credited the amount of deposit in this respect ;

(*f*) whether at least in the year 1955-56, power will be supplied to these parts for irrigation ?

A.—**Dr. R. NAGAN GOWDA** (Minister for Agriculture).—

(*a*) 186.

(*b*) Rs. 1·99 lakhs for the villages of Chelur, Kodiyala, Irkasandra and Bidare.

(*c*) and (*d*) Deposits have been received in respect of pump sets with a total capacity of 511 H.P.

(*e*) 133.

(*f*) Sanction to the estimate during 1955-56 will be considered.

ಶ್ರೀ ಬಿ. ಸಿ. ನಂಜುಂಡಯ್ಯ.—ಹೋದವರ್ಷ 54-55ರಲ್ಲಿ ಕೇಂದ್ರ ಸರ್ಕಾರದಿಂದ I.P. Sets ಗೋಸ್ಕರ ಎಷ್ಟು ಹಣ ಸಹಾಯ ಬಂತು ?

ಡಾ॥ ಆರ್. ನಾಗನಗೌಡ.—65 ಲಕ್ಷ ರೂಪಾಯಿಗಳು.

ಶ್ರೀ ಬಿ. ಸಿ. ನಂಜುಂಡಯ್ಯ.—ಎಷ್ಟು ಪೊಬಲಗು ತುಮಕೂರು ಜಿಲ್ಲೆಗೆ ಖರ್ಚು ಮಾಡಲಾಯಿತು ಎಂಬುದನ್ನು ಹೇಳುತ್ತೀರಾ ?

ಡಾ॥ ಆರ್. ನಾಗನಗೌಡ.—ನಾವು ವರ್ಷಾರಂಭದಲ್ಲಿ ಏನು ಮಾಡಿದೆವು ಅಂದರೆ ಒಂದೊಂದು distress ಜಿಲ್ಲೆಗೆ ಇಷ್ಟು ಪೊಬಲಗು ಎಂದು allocate ಮಾಡಿದ್ದೇವೆ. Exact figure ಈಗ ಗೊತ್ತಿಲ್ಲ.

ಶ್ರೀ ಬಿ. ಸಿ. ನಂಜುಂಡಯ್ಯ.—"*A*" ಪ್ರಶ್ನೆಯಲ್ಲಿ ಕೇಳಿರುವ ಪ್ರದೇಶಗಳೆಲ್ಲಾ ಅಭಾವ ಪ್ರದೇಶಗಳೆಂಬುದಾಗಿ ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಹೌದು.

ಶ್ರೀ ಬಿ. ಸಿ. ನಂಜುಂಡಯ್ಯ.—ಆ ಪ್ರದೇಶಗಳ ಜನರು ಆ ಪ್ರದೇಶಗಳಿಗೆ power supply ಬೇಕೆಂದು 17 ವರ್ಷಗಳಿಂದಲೂ ಕೇಳುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಬಂದಿದೆ. ಈಗ 186 applications ಕೊಟ್ಟಿದ್ದಾರೆ. ಅದರಲ್ಲಿ ಎಲ್ಲರೂ deposit ಮುಂತಾದ್ದನ್ನು ಕೊಟ್ಟಿಲ್ಲ. ಅದಕ್ಕೋಸ್ಕರ ನಾವು estimateಗಳನ್ನು ತಯಾರು ಮಾಡಿಲ್ಲ. Applications ಬಂದಹಾಗೆಲ್ಲಾ estimates ಮಾಡಿಕೊಳ್ಳುತ್ತಾ ಬರುತ್ತಿದ್ದೇವೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಈ 133 applications ಕೊಟ್ಟಿರುವವರೆಲ್ಲರೂ deposit ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಕೊಟ್ಟಿದ್ದಾರೆ.

ಶ್ರೀ ಬಿ. ಸಿ. ನಂಜುಂಡಯ್ಯ.—133 applications ಅನುಗುಣವಾಗಿ estimates ಸರಕಾರದ ವರಿಗೆ ಬಂದಿವೆಯೇ ?

ಡಾ॥ ಆರ್. ನಾಗನಗೌಡ.—Estimates ಬಂದಿವೆ.

ಶ್ರೀ ಬಿ. ಸಿ. ನಂಜುಂಡಯ್ಯ.—ನನ್ನ (*f*) ಪ್ರಶ್ನೆಗೆ ಉತ್ತರದಲ್ಲಿ "Sanction to the Estimate during 1955-56 will be considered" ಎಂದು ಹೇಳಿದ್ದೀರಿ. ಸಾಂಕ್ಷನ್ ಮಾಡುವುದಕ್ಕೇ ಇಷ್ಟು ದಿವಸವಾದಮೇಲೆ, ಇನ್ನು ಪವರ್ ಯಾವಾಗ ಬರುತ್ತದೆ ?

ಡಾ॥ ಆರ್. ನಾಗನಗೌಡ.—1955-56ರಲ್ಲಿ ಸ್ಯಾಂಕ್ಷನ್ ಮಾಡಿ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಮುಂದಿನ ವರ್ಷವಾದರೂ ಬರಬಹುದೆಂದು ಭಾವಿಸಬಹುದೇ ?

ಡಾ॥ ಆರ್. ನಾಗನಗೌಡ.—ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಈ ಅಭಾವದ ಪ್ರದೇಶಗಳಲ್ಲಿ ಒಂದು H. P.ಗೆ ಸಾವಿರ ರೂಪಾಯಿಗಳಿಗಿಂತಲೂ ಜಾಸ್ತಿ ಮಾಡಿಕೊಂಡು I. P. ಸೆಟ್ಟುಗಳನ್ನು ಕೊಡುವುದಕ್ಕಾಗುತ್ತದೆಯೇ ?

ಡಾ॥ ಆರ್. ನಾಗನಗೌಡ.—ಸಾವಿರ ರೂಪಾಯಿಗಿಂತಲೂ ಹೆಚ್ಚಿಗೆ ಒಂದು H. P.ಗೆ ಹೋದರೆ ರಿಟರ್ನ್ ಬಹಳ ಕಡಮೆಯಾಗುತ್ತದೆ. ಈಗಾಗಲೇ ನಾವು ಎಷ್ಟು interest ಕೊಟ್ಟಿದ್ದೇವೋ ಅಷ್ಟೂ ಬರುತ್ತಿಲ್ಲ. ಆದ್ದರಿಂದ ಸಾವಿರ ರೂಪಾಯಿಗಳಿಗಿಂತಲೂ ಜಾಸ್ತಿ ಮಾಡಲು ಸಾಧ್ಯವಾಗುವುದಿಲ್ಲ.

ಶ್ರೀ ಬಿ. ಸಿ. ನಂಜುಂಡಯ್ಯ.—ಇದರಿಂದ ಅಭಾವದ ಪ್ರದೇಶಗಳಿಗೆ ಹೆಚ್ಚಿಗೆ ಸಹಾಯ ಮಾಡಿದಂತಾಗುವುದಿಲ್ಲವೇ ?

ಡಾ॥ ಆರ್. ನಾಗನಗೌಡ.—ಸಹಾಯ ಮಾಡಿದಂತಾಗುತ್ತದೆ. ರೈತರೂ, ಎತ್ತು ಮುಂತಾದುವುಗಳನ್ನ ತೆಗೆದುಕೊಳ್ಳುವುದಾದರೆ ಎಷ್ಟು ಖರ್ಚಾಗುತ್ತದೆಂಬುದನ್ನು ನೋಡಬೇಕು.

ಶ್ರೀ ಎಸ್. ಸಿದ್ದಪ್ಪ.—ಸಂಸ್ಥಾನದಲ್ಲಿ ಯಾವ ಯಾವ ಸ್ಥಳಗಳು ಅಭಾವ ಸ್ಥಳಗಳೆಂದು ತೀರ್ಮಾನ ಮಾಡಿದ್ದೀರಿ ?

ಡಾ॥ ಆರ್. ನಾಗನಗೌಡ.—ಈ ಪ್ರಶ್ನೆಗೆ ಸಂಬಂಧ ಪಟ್ಟಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಈಗ ತಮಗೆ ಬಂದಿರತಕ್ಕ 65 ಲಕ್ಷ ರೂಪಾಯಿಗಳನ್ನು ಹಂಚುವಾಗ ಕ್ಷಾಮ ಪ್ರದೇಶಗಳೆಂದು ಕೆಲವು ಭಾಗಗಳನ್ನು ಪರಿಗಣಿಸುವ ವರಾಗಿದ್ದೀರಿ. ಯಾವ ಯಾವ ಪ್ರದೇಶಗಳನ್ನು ಕ್ಷಾಮ ಪ್ರದೇಶವೆಂದು ಭಾವಿಸಿದ್ದೀರಿ.

(ಉತ್ತರವಿಲ್ಲ)

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಅಭಾವ ಪ್ರದೇಶ ಎಂದರೆ, ಅಲ್ಲಿ ಹಣದ ಅಭಾವ ಉಂಟಾಗಿದೆ ತಾನೆ ? ಅದಕ್ಕೇ ಜಾಸ್ತಿಕೊಡಬೇಕೆಂದು ಕೇಳುತ್ತಿರುವುದು ಅಲ್ಲವೇ ?

ಡಾ॥ ಆರ್. ನಾಗನಗೌಡ.—ಸರ್ಕಾರಕ್ಕೂ ಹಣದ ಅಭಾವ. ಅದು ಮಳೆ ಕಡಿಮೆಯಾಗಿ ಬೀಳುವ ಪ್ರದೇಶವೆಂದು ಭಾವನೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಅಲ್ಲಿ ಬೆಳೆಯಾವಾಗಲೂ ಇಲ್ಲ. ಅಲ್ಲಿನ economic conditions ಕೂಡ ಬಹಳ ಕಡಮೆಯೆಂದು ಭಾವಿಸಬಹುದಲ್ಲವೇ ?

ಡಾ॥ ಆರ್. ನಾಗನಗೌಡ.—ಹೌದು.